ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಚುಕ್ಕೆ ಗುರುತಿಲ್ಲದ ೨೭ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ಬಗ್ಗೆ

೧೫೯೨ (೧೨೪೫) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ಳರಲ್ಲಿ ಇತ್ತೀಚೆಗೆ ವಾಹನಗಳ ಓಡಾಟ ಜಾಸ್ತಿಯಾಗಿ ಅಪಘಾತಗಳಿಂದ ಹೆಚ್ಚು ಸಾವು ನೋವುಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬೆಂಗಳೂರಿನಿಂದ ಮುಳುಬಾಗಿಲಿನವರೆಗೂ ರಾಷ್ಟ್ರೀಯ ಹೆದ್ದಾರಿ ನ. ಳನ್ನು ಳ ದಾರಿಗಳ ರಸ್ತೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ ?

ಇ) ಮೇಲ್ಕಂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಓಡಾಟ ವೇಗವಾಗಿ ಚಲಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಈ) ಮುಳುಬಾಗಿಲಿನ ಪಟ್ಟಣದ ಬಳಿ ವಾಹನಗಳ ಅಪಘಾತಗಳನ್ನು ತಪ್ಪಿಸಲು ಪಟ್ಟಣದ ಪಕ್ಕದಲ್ಲಿ ಬೈಪಾಸ್ ರಸ್ತೆಯನ್ನು ಮಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳು ಯಾವ ಹಂತದಲ್ಲಿವೆ ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಬೆಂಗಳೂರಿನಿಂದ ಮದ್ರಾಸ್‌ವರೆಗೆ ಈ ರಸ್ತೆಯನ್ನು 'ಎಕ್ಸ್‌ಪ್ರೆಸ್ ಹೈವೇ' ಆಗಿ ೨೦೦೦ ಎ. ಡಿ. ಒಳಗೆ ಅಭಿವೃದ್ಧಿಪಡಿಸಲು, ಕೇಂದ್ರ ಸರ್ಕಾರದವರು ಯೋಜನೆ ಹಾಕಿಕೊಂಡಿದ್ದಾರೆ. ಸದ್ಯಕ್ಕೆ ಬೆಂಗಳೂರಿನಿಂದ ಹೊಸಕೋಟೆಯವರೆಗೆ ರಸ್ತೆಯನ್ನು ಳ ಪಥ ರಸ್ತೆಯನ್ನಾಗಿ ಮಾಡಲು ಇನೇ ಪಂಚ ವಾರ್ಷಿಕ ಯೋಜನೆಯಲ್ಲಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಬೆಂಗಳೂರಿನಿಂದ ರಾಜ್ಯದ ಗಡಿಯವರೆಗೆ ರಸ್ತೆಯನ್ನು ಹಂತಹಂತವಾಗಿ, ಸಂಪೂರ್ಣವಾಗಿ ಬಲ ಪಡಿಸಲಾಗಿದೆ. ಮತ್ತು ಕೋಲಾರಕ್ಕೆ ಒಂದು ಬೈಪಾಸ್ ನಿರ್ಮಿಸಲಾಗಿದೆ. ನರಸಾಪುರಕ್ಕೂ ಕೂಡ ಬೈಪಾಸ್ ರಸ್ತೆ ನಿರ್ಮಿಸಲಾಗಿದೆ.

ಈ) ಮುಳಬಾಗಿಲಿನ ಬೈಪಾಸ್ ರಸ್ತೆಗೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ರೂ. ೧೮೩.೮೪ ಲಕ್ಷ ರೂ.ಗಳ ಅಂದಾಜು ಪಟ್ಟಿ ಮಂಜೂರಾಗಿದ್ದು ಈ ಕೆಲಸವನ್ನು ಟೆಂಡರ್ ಮೂಲಕ ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದು.

ಮುಳಬೆಗಿಲು ಪಟ್ಟಣದ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ನಿರ್ಮಾಣ

೧೫೯೩ (೧೨೬೭) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮುಳಬಾಗಿಲು ಪಟ್ಟಣದ ಪಕ್ಕದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬೈಪಾಸ್ ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಆ) ಬೈಪಾಸನ್ನು ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚವೆಷ್ಟು?

ಇ) ಪಟ್ಟಣದಲ್ಲಿ ದಿನೇ ದಿನೇ ಅಪಘಾತಗಳು ಹೆಚ್ಚಾಗುತ್ತಿರುವ ಪ್ರಯುಕ್ತ ಸದರಿ ಬೈಪಾಸನ್ನು ಕೂಡಲೇ ನಿರ್ಮಾಣ ಮಾಡಲು ಕಾರ್ಯಕ್ರಮ ಕೈಗೊಳ್ಳುವರೆ?

ಈ) ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬೈಪಾಸ್‌ಗೆ ಬೇಕಾಗುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಮುಳಬಾಗಿಲು ಬೈಪಾಸ್ ರಸ್ತೆ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ೨೯-೧೦-೯೧ರಲ್ಲಿ ಅಂದಾಜುಪಟ್ಟಿ ಮಂಜೂರಾಗಿದೆ. ಕೆಲಸವನ್ನು ಕೈಗೊಳ್ಳಲು ಸೂತ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬೈಪಾಸ್ ರಸ್ತೆ ಕೆಲಸಕ್ಕೆ ೧೮೩.೮೪ ಲಕ್ಷ ರೂ. ಗಳಲ್ಲಿ ಅಂದಾಜು ಪಟ್ಟಿ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ.

ಇ) ಈ ಕೆಲಸಕ್ಕೆ ಟೆಂಡರ್ ಕರೆದಿದ್ದು ಕೆಲಸವನ್ನು ಶೀಘ್ರದಲ್ಲೇ ಟೆಂಡರ್ ಮೂಲಕ ಕೈಗೆತ್ತಿ ಕೊಳ್ಳಲಾಗುವುದು.

ಈ) ಈ ಕೆಲಸಕ್ಕೆ ಟೆಂಡರ್‌ಗಳು ಬಂದಿದ್ದು ಪರಿಶೀಲನೆಯಲ್ಲಿದ್ದು ಶೀಘ್ರದಲ್ಲೇ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಜಿಲ್ಲಾಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ವರ್ಗವಾಗಿರುವ ರಸ್ತೆಗಳು

೧೩೬೪ (೧೨೬೯) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ಎಷ್ಟು ಕಿ. ಮೀ. ರಸ್ತೆ ವರ್ಗಾಯಿಸಬೇಕೆಂದಿರುವರು?

ಆ) ಲೋಕೋಪಯೋಗಿ ಇಲಾಖೆಗೆ ಸೇರಿದ ನಂತರ ಸರ್ಕಾರದವರು ಸದರಿ ರಸ್ತೆಗಳಿಗೆ ಕಿ. ಮೀ. ಒಂದಕ್ಕೆ ಎಷ್ಟು ಹಣ ಖರ್ಚು ಮಾಡಿ ಉತ್ತಮಪಡಿಸಲು ನಿರ್ಧರಿಸಿರುವರು?

ಇ) ಕೆಲವು ಮುಖ್ಯವಾದ ರಸ್ತೆಗಳಿಗೆ ಡಾಂಬರು ಹಾಕಲು ಪ್ರಯತ್ನಿಸುವರೇ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ.ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು